**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ನ್ಯಾಯಾಲಯ,**
**ಶ್ರೀರಂಗಪಟ್ಟಣ.**

ಸಿ.ಸಿ.ಃ 344/2013

ಪಿ. ಡಬ್ಲ್ಯು: 02
ಸಿ. ಡಬ್ಲ್ಯು: 03

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಪ್ರಕಾಶ್ |
| ತಂದೆ/ಪತಿಯ ಹೆಸರು | ಃ | ತಿಮ್ಮೇಗೌಡ |
| ವಯಸ್ಸು | ಃ | 46 ವರ್ಷ |
| ವೃತ್ತಿ | ಃ | ವ್ಯವಸಾಯ |
| ವಾಸ | ಃ | ಚಿಕ್ಕಂಕನಹಳ್ಳಿ ಗ್ರಾಮ |

ಸಾಕ್ಷಿಗೆ ಪ್ರಮಾಣ ವಚನ ಮಾಡಿಸಿದ ದಿನಾಂಕಃ 06.12.2022

ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದ

ಸಾಕ್ಷಿಗೆ ನಿಪಿ.1 ಅನ್ನು ತೋರಿಸಲಾಗಿ ಅದರಲ್ಲಿ ತನ್ನ ಸಹಿ ಇರುವುದನ್ನು ಒಪ್ಪಿದು ಸಾಕ್ಷಿಯ ಸಹಿಯನ್ನು ನಿಪಿ.1-ಬಿ ಎಂದು ಗುರುತಿಸಲಾಯಿತು. ನಿಪಿ.1 ಕ್ಕೆ ನಾನು ಸುಮಾರು 6-7 ವರ್ಷಗಳ ಹಿಂದೆ ಸಹಿ ಮಾಡಿದ್ದೇನೆ. ನಿಪಿ.1 ಕ್ಕೆ ನಾನು ಯಾವ ಕಾರಣಕ್ಕೆ ಸಹಿ ಮಾಡಿದ್ದೇನೆ ಎಂದು ಗೊತ್ತಿಲ್ಲ. ನನ್ನ ಸಂಗಡ ನಿಪಿ.1 ಕ್ಕೆ ಚನ್ನೇಗೌಡ ಎನ್ನುವವರು ಸಹ ಸಹಿ ಮಾಡಿದ್ದಾರೆ. ನನ್ನ ಸಮಕ್ಷಮ ಪೋಲೀಸರು ಯಾವುದೇ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿಲ್ಲ. ನಾನು ಘಟನೆ ಸಂಬಂಧ ಯಾವುದೇ ಹೇಳಿಕೆಯನ್ನು ಪೋಲೀಸರಿಗೆ ನೀಡಿಲ್ಲ.

ಸಾಕ್ಷಿಗೆ ನಿಪಿ.2 ಮತ್ತು ನಿಪಿ.3 ಭಾವಚಿತ್ರವನ್ನು ತೋರಿಸಲಾಗಿ ಅದರಲ್ಲಿ ತಾನು ಇರುವುದನ್ನು ಒಪ್ಪಿರುತ್ತಾರೆ. ನಿಪಿ.2 ಮತ್ತು 3 ಅನ್ನು ಯಾವ ಕಾರಣಕ್ಕೆ ತೆಗೆದಿದ್ದಾರೆಂದು ಗೊತ್ತಿಲ್ಲ.

(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಂದು ಪರಿಗಣಿಸಿ ಪಾಟಿ ಸವಾಲು ಅನುಮತಿ ನೀಡುವಂತೆ ಪ್ರಾರ್ಥಿಸಿದ್ದು ನೀಡಲಾಗಿದೆ)

**ಪಾಟಿ ಸವಾಲುಃ ಮಾನ್ಯ ಸ.ಸ.ಅ ರವರಿಂದ**

ದಿಃ ೧೫.೦೮.೨೦೧೩ ರಂದು ಗಾಮನಹಳ್ಳಿ ಗ್ರಾಮದ ಅಂಗಡಿ ಚೆನ್ನಪ್ಪ ನವರ ಪೆಟ್ಟಿ ಅಂಗಡಿ ಬಳಿ ನನ್ನ ಮತ್ತು ಚೆನ್ನೇಗೌಡ ರವರ ಸಮಕ್ಷಮ ಪೋಲೀಸರು ಚೆನ್ನಪ್ಪ ಎಂಬುವವರು ಯಾವುದೇ ಪರವಾನಿಗೆ ಇಲ್ಲದೇ ಮದ್ಯ ತುಂಬಿದ ಬಾಟಲ್ ಗಳನ್ನು

ಇಟ್ಟುಕೊಂಡು ಅಕ್ರಮವಾಗಿ ಮಾರಾಟ ಮಾಡುತ್ತಿದ್ದಾರೆ ಎನ್ನುವ ಮಾಹಿತಿ ಬಂದಿದೆ ಎಂದು ಚಾಸಾ.೧ ರವರು ನಮಗೆ ಮಾಹಿತಿ ನೀಡಿ ದಾಳಿಯ ಸಮಯದಲ್ಲಿ ಪಂಚರಾಗಿರುವಂತೆ ಕೋರಿಕೊಂಡಿದ್ದರು ಎಂದರೆ ಸರಿಯಲ್ಲ. ನಾವು ಸಂಜೆ ೦೪.೪೫ ಸಮಯದಲ್ಲಿ ಅರಕೆರೆಯಿಂದ ಚಾಸಾ.೧ ಮತ್ತು ಅವರ ಸಿಬ್ಬಂದಿಯವರ ಜೊತೆ ಹೊರಟು ಸಂಜೆ ೦೫.೧೫ ಸಮಯದಲ್ಲಿ ಗಾಮನಹಳ್ಳಿ ಗ್ರಾಮದ ಅಂಗಡಿ ಚೆನ್ನಪ್ಪ ಎನ್ನುವವರ ಪೆಟ್ಟಿ ಅಂಗಡಿ ಬಳಿ ಸ್ವಲ್ಪ ದೂರದಲ್ಲಿ ಜೀಪ್ ನಿಲ್ಲಿಸಿ ನಂತರ ಅಲ್ಲಿ ಹೋಗಿ ನೋಡಲಾಗಿ ಅಂಗಡಿಯಿಂದ ಇಬ್ಬರು ವ್ಯಕ್ತಿಗಳು ಬಾಟಲುಗಳನ್ನು ಪಡೆದುಕೊಂಡು ಮದ್ಯವನ್ನು ಪ್ಲಾಸ್ಟಿಕ್ ಲೋಟಗಳಿಗೆ ಹಾಕಿ ಕುಡಿಯುತ್ತಾ ನಿಂತಿದ್ದರು ಮತ್ತು ಪೋಲೀಸ್ ಜೀಪ್ ನೋಡಿ ಆ ಇಬ್ಬರು ವ್ಯಕ್ತಿಗಳು ಬಾಟಲಿಗಳನ್ನು ಅಲ್ಲಿಯೇ ಬಿಟ್ಟು ಸ್ಥಳದಿಂದ ಓಡಿ ಹೋದರು ಎಂದರೆ ಸರಿಯಲ್ಲ.

ಆ ಸಮಯದಲ್ಲಿ ಪೋಲೀಸರು ಪೆಟ್ಟಿ ಅಂಗಡಿ ಬಳಿ ಹೋಗಿ ಅಲ್ಲಿ ದಾಳಿ ಮಾಡಿದ ಸದರಿ ಅಂಗಡಿಯಲ್ಲಿ ಚೆನ್ನಪ್ಪ ಎಂಬುವವರು ಇರುವುದು ಗೊತ್ತಾಯಿತು ಎಂದರೆ ಸರಿಯಲ್ಲ. ಆಗ ಅಂಗಡಿ ಪಕ್ಕದಲ್ಲಿ ನೋಡಿದಾಗ ೨ ಡ್ರಿಂಕ್ಸ್ ಬಾಟಲಿಗಳು ಇದ್ದು ಅವುಗಳ ಮೇಲೆ ಸೂಪರ್ ಜಾಕ್ ಫೈನ್ ಬ್ರಾಂದಿ ಎನ್ನುವ ಮದ್ಯ ತುಂಬಿದ ೧೮೦ ಎಂ.ಎಲ್ ಅಳತೆಯ ಬಾಟಲುಗಳು ಮತ್ತು ಅದರ ಪಕ್ಕದಲ್ಲಿಯೇ ೨ ಪ್ಲಾಸ್ಟಿಕ್ ಲೋಟಗಳು ಇದ್ದವು ಮತ್ತು ಅವುಗಳನ್ನು ಪೋಲೀಸರು ತೆಗೆದುಕೊಂಡರು ಎಂದರೆ ಸರಿಯಲ್ಲ.

ನಂತರ ಅಂಗಡಿಯನ್ನು ಪರಿಶೀಲಿಸಿದಾಗ ರಟ್ಟಿನ ಬಾಕ್ಸ್ ನಲ್ಲಿ ೧೮೦ ಎಂ.ಎಲ್. ಅಳತೆಯ ಮದ್ಯ ತುಂಬಿದ ಸೂಪರ್ ಜಾಕ್ ಫೈನ್ ಬ್ರಾಂದಿ ಬಾಟಲಿಗಳು ಇದ್ದವು ಸದರಿ ಬಾಟಲಿಗಳನ್ನು ಪಾಲಿತಿನ್ ಕವರಿನಿಂದ ಸುತ್ತಿಡಲಾಗಿತ್ತು ಎಂದರೆ ಸರಿಯಲ್ಲ. ಚೆನ್ನಪ್ಪರವರನ್ನು ಲೈಸನ್ಸ್ ಕೇಳಲಾಗಿ ಆತ ಯಾವುದೇ ಲೈಸನ್ಸ್ ಇಲ್ಲವೆಂದು ತಿಳಿಸಿದ್ದು ಪೋಲೀಸರು ಮಹಜರ್ ಅನ್ನು ಸಂಜೆ ೦೫.೩೦-೦೬.೧೫ ವರೆಗೆ ಜರುಗಿಸಿ ತಮ್ಮ ವಶಕ್ಕೆ ಪಡೆದರು ಎಂದರೆ ಸರಿಯಲ್ಲ. ನಂತರ ಚೆನ್ನಪ್ಪ ನನ್ನು ಪೋಲೀಸ ಠಾಣೆಗೆ ಕರೆದುಕೊಂಡು ಹೋಗಲು ಜೀಪ್ ನಲ್ಲಿ ಕೂರಿಸಿಕೊಂಡು ಸಂಜೆ ೦೬.೨೫ ಸಮಯಕ್ಕೆ ಅಲ್ಲಿಂದ ಹೊರಟಾಗ ಆರೋಪಿಗಳು ಅಲ್ಲಿಗೆ ಅಕ್ರಮ ಗುಂಪು ಕಟ್ಟಿಕೊಂಡು ಬಂದು ನಮ್ಮ ಜೊತೆ ಇದ್ದ ಪೋಲೀಸರ ಮೇಲೆ ಗಲಾಟೆ ಮಾಡುವ ಉದ್ದೇಶದಿಂದ ಪೋಲೀಸ್ ಜೀಪ್ ಸಂಃಕೆಎ-೧೧ ಜಿ-೨೫೦ ಅನ್ನು ಅಡ್ಡಗಟ್ಟಿ ನಿಲ್ಲಿಸಿಕೊಂಡು ಅವರ ಮೇಲೆ ಗಲಾಟೆ ಮಾಡಿ ಅವಾಚ್ಯ ಶಬ್ದಗಳಿಂದ ಬೈದರು ಎಂದರೆ ಸರಿಯಲ್ಲ. ನಂತರ ಆರೋಪಿಗಳು

ಸಮವಸ್ತ್ರದಲ್ಲಿದ್ದ ಜೀಪ್ ಡ್ರೈವರ್ ನನ್ನು ಜೀಪ್ ನಿಂದ ಬಲವಂತವಾಗಿ ಕೆಳಗೆ ಇಳಿಸಿಕೊಂಡು ಆತನ ಕತ್ತಿನ ಮೇಲೆ ಕೈಗಳಿಂದ ಹೊಡೆದು ಕೆಳಗೆ ಬೀಳಿಸಿದರು ಎಂದರೆ ಸರಿಯಲ್ಲ. ಆನಂದ, ಚೌಡಯ್ಯ, ರವಿ ಹಾಗೂ ನಮ್ಮನ್ನು ಜೀಪ್ ನಿಂದ ಕೆಳಗೆ ಇಳಿಸಿ ಪೋಲೀಸ್ ವಶದಲ್ಲಿದ್ದ ಚೆನ್ನಪ್ಪನನ್ನು ಪೋಲೀಸರು ಬೇಡವೆಂದರು ಬಲವಂತದಿಂದ ಜೀಪ್ ನಿಂದ ಕೆಳಗೆ ಇಳಿಸಿಕೊಂಡರು ಎಂದರೆ ಸರಿಯಲ್ಲ. ನಂತರ ಆರೋಪಿಗಳಲ್ಲಿ ಒಬ್ಬ ಚಾಸಾ.೧ ರವರ ಕತ್ತಿನ ಪಟ್ಟಿ ಹಿಡಿದು ಎಳೆದಾಡಿದ ಎಂದರೆ ಸರಿಯಲ್ಲ. ಚೆನ್ನಪ್ಪ ಕಬ್ಬಿಣ್ಣದ ಬಟ್ಟನ್ನು ತೆಗೆದುಕೊಂಡು ಬಂದು ಚೌಡಯ್ಯ ಎಂಬ ಪೋಲೀಸರ ತಲೆಯ ಎಡಭಾಗದ ಹಣೆಯ ಹತ್ತಿರ ಗುದ್ದಿ ರಕ್ತಗಾಯ ಪಡಿಸಿದ ಎಂದರೆ ಸರಿಯಲ್ಲ. ನಂತರ ಮತ್ತೊಬ್ಬ ಆರೋಪಿ ರವಿ ಎಂಬ ಪೋಲೀಸರ ಕತ್ತಿನ ಪಟ್ಟಿ ಹಿಡಿದು ಕೈಗಳಿಂದ ಮುಖಕ್ಕೆ ಹೊಡೆದು ಎಳೆದಾಡಿ ಶರ್ಟ್ ಅನ್ನು ಹರಿದು ಹಾಕಿದ ಎಂದರೆ ಸರಿಯಲ್ಲ. ಆರೋಪಿಗಳ ಪೈಕಿ ಇಬ್ಬರು ಸಮವಸ್ತ್ರದಲ್ಲಿದ್ದ ಆನಂದ ಎಂಬ ಪೋಲೀಸರ ಸಮವಸ್ತ್ರವನ್ನು ಹರಿದು ಹಾಕಿ ತಮ್ಮ ಕೈಗಳಿಂದ ಮುಖಕ್ಕೆ, ಕತ್ತಿಗೆ ಹಾಗೂ ಎಡಗೈಗೆ ಹೊಡೆದರು ಎಂದರೆ ಸರಿಯಲ್ಲ.

ನಾವು ಬಿಡಿಸಲು ಪ್ರಯತ್ನ ಪಟ್ಟರೂ ಸಹ ನಮ್ಮನ್ನು ಲೆಕ್ಕಿಸದೇ ಹೊಡೆದವರ ಜೊತೆ ಇನ್ನೂ ಕೆಲವರು ಬಂದು ಪೋಲೀಸರನ್ನು ಹಿಡಿದು ಎಳೆದಾಡಿ ಕೈಗಳಿಂದ ಹೊಡೆದು ಪೋಲೀಸರ ಸರ್ಕಾರಿ ಕೆಲಸಕ್ಕೆ ಅಡ್ಡಿ ಉಂಟು ಮಾಡುತ್ತಾ ಇವರನ್ನು ಜೀಪ್ ಸಮೇತ ಬೆಂಕಿ ಹಾಕಿ ಸುಟ್ಟಿ ಹಾಕೋಣ ಎಂದು ಪ್ರಾಣ ಬೆದರಿಕೆ ಹಾಕಿದರು ಎಂದರೆ ಸರಿಯಲ್ಲ. ಆ ತಕ್ಷಣ ಪೋಲೀಸರು ಜೀಪ್ ಹತ್ತಿಕೊಂಡು ಅಮಾನತ್ತು ಪಡಿಸಿದ್ದ ಮದ್ಯದ ಬಾಟಲುಗಳನ್ನು ರಟ್ಟಿನ ಬಾಕ್ಸ್ ಸಮೇತ ನಮ್ಮನ್ನು ಕೂರಿಸಿಕೊಂಡು ಅರಕೆರೆ ಪೋಲೀಸ್ ಠಾಣೆಗೆ ಬಂದರು ಎಂದರೆ ಸರಿಯಲ್ಲ.

ನಂತರ ತಿಳಿಯಲಾಗಿ ಸಮವಸ್ತ್ರದಲ್ಲಿದ್ದ ಎಸ್.ಐ. ರವರ ಕತ್ತಿನ ಪಟ್ಟಿಯನ್ನು ಹಿಡಿದು ಎಳೆದಾಡಿದ ವ್ಯಕ್ತಿಯ ಹೆಸರು ಮುತ್ತುರಾಜ್, ರವಿ ರವರ ಶರ್ಟ್ ಹರಿದು ಕೈಗಳಿಂದ ಮುಖಕ್ಕೆ ಹೊಡೆದ ವ್ಯಕ್ತಿಯ ಹೆಸರು ಪುಟ್ಟಸ್ವಾಮಿ, ಆನಂದ್ ರವರ ಸಮವಸ್ತ್ರವನ್ನು ಹರಿದುಹಾಕಿ ಅವರಿಗೆ ಹಲ್ಲೆ ಮಾಡಿದ ವ್ಯಕ್ತಿಗಳ ಹೆಸರು ಮಹೇಶ್ ಬಿನ್ ಮಾಯಿಗಯ್ಯ, ಮಹೇಶ್ ಬಿನ್ ಶಿವಸ್ವಾಮಿ ಅಂತಲೂ ಶ್ರೀನಿವಾಸ್ ರವರ ಕತ್ತಿನ ಪಟ್ಟಿ ಹಿಡಿದು ಅವರಿಗೆ ಹಲ್ಲೆ ಮಾಡಿದ ವ್ಯಕ್ತಿಯ ಹೆಸರು ಕೃಷ್ಣ ಹಾಗೂ ಪ್ರಾಣ ಬೆದರಿಕೆ ಹಾಕಿದ ವ್ಯಕ್ತಿಯ ಹೆಸರು

ರಘುರಾಜೇ ಅರಸ್, ರಮೇಶ್ ಹಾಗೂ ಮಾದೇಶ ಎಂದು ಗೊತ್ತಾಯಿತು ಎಂದರೆ ಸರಿಯಲ್ಲ.

ಆರೋಪಿತರು ಹೊಡೆದಾಗ ಎಸ್.ಐ ಮತ್ತು ಪೋಲೀಸರಿಗೆ ಸಣ್ಣ ಪುಟ್ಟ ಏಟಾಗಿರುತ್ತದೆ ಎಂದರೆ ಸರಿಯಲ್ಲ. ಗಾಮನಹಳ್ಳಿಯಲ್ಲಿ ವಶಕ್ಕೆ ತೆಗೆದುಕೊಂಡು ೨ ಮದ್ಯ ತುಂಬಿದ ಬಾಟಲಿಗಳು, ಅಲ್ಲೇ ಕುಡಿದು ಇಟ್ಟಿದ್ದ ಸ್ವಲ್ಪ ಸ್ವಲ್ಪ ಮದ್ಯ ಇದ್ದ ೨ ಬಾಟಲಿಗಳನ್ನು ಎಫ್.ಎಸ್.ಎಲ್. ತಜ್ಞರಿಗೆ ಕಳುಹಿಸುವ ಸಲುವಾಗಿ ನಮ್ಮ ಸಮಕ್ಷಮ ಪ್ರತ್ಯೇಕವಾಗಿ ಬಿಳಿಯ ಬಟ್ಟೆಯ ಚೀಲಗಳಿಗೆ ಹಾಕಿ ಅವುಗಳ ಬಾಯಿ ಹೊಲೆದು ಎಸ್ ಎಂಬ ಇಂಗ್ಲೀಷ್ ಅಕ್ಷರದಿಂದ ಸೀಲ್ ಮಾಡಿ ನಿಪಿ.೧ ಮಹಜರ್ ಮಾಡಿ ತಮ್ಮ ವಶಕ್ಕೆ ಪೋಲೀಸರು ಪಡೆದಿದ್ದರು ಎಂದರೆ ಸರಿಯಲ್ಲ. ಘಟನೆ ಸಂಬಂಧ ನನಗೆ ಓದಿ ಹೇಳಿದಂತೆ ಪೋಲೀಸರಿಗೆ ಹೇಳಿಕೆಯನ್ನು ನೀಡಿದ್ದೇನು ಎಂದರೆ ಸರಿಯಲ್ಲ. ಸಾಕ್ಷಿ ನಿರಾಕರಿಸಿದ ಹೇಳಿಕೆಯನ್ನು ನಿಪಿ.೪ ಎಂದು ಗುರುತಿಸಲಾಯಿತು.

ಆರೋಪಿತರಿಗೆ ಸಹಾಯ ಮಾಡುವ ಉದ್ದೇಶದಿಂದ ಆರೋಪಿತರು ಅಪರಾಧಿಕ ಕೃತ್ಯಗಳನ್ನು ಎಸಗಿದ್ದರೂ ಕೂಡ ಸುಳ್ಳು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟಿ ಸವಾಲುಃ ಆರೋಪಿ ಪರ ವಕೀಲರಿಂದ**

ಏನು ಇಲ್ಲ

ಮರು ವಿಚಾರಣೆ ಇಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.